"ಕೋಪ ಮಾಡಿಕೊಳ್ಳಬೇಡಿ" ಎಂದವನು, ನಿಜವಾಗಿಯೂ ಅವರು ಬಂದಿದ್ದರೆಂದೂ ನಡೆದಿದ್ದೆಲ್ಲವನ್ನೂ ವಿವರಿಸಿದ.

"ನಿಮಗೆ ಕನಸು ಬಿದ್ದಿರಬಹುದು. ಅವರು ಅಷ್ಟುದೂರ ಒಬ್ಬರೇ ಹೋಗುವುದೇ ಇಲ್ಲ. ಅವರಿಗೆ ಸಕ್ಕರೆಕಾಯಿಲೆ ವಿಪರೀತಕ್ಕೇರಿದೆ. ಸೋಮವಾರ ಸಂಜೆ ನಾನಿಲ್ಲದಿದ್ದಾಗ ಬಾಯಿ ಚಪಲಕ್ಕೆ ಸಕ್ಕರೆ ಹಾಕಿದ ಚಹಾ ಮಾಡಿ ಕುಡಿದು ಶುಗರ್ ಇನ್ನೂ ಹೆಚ್ಚಾಗಿ ಅದೇ ದಿನ ರಾತ್ರೆ ಸಣ್ಣಗೆ ಹೃದಾಯಾಘಾತವಾಗಿ ಕೋಮಾ ಸ್ಥಿತಿಯಲ್ಲಿದ್ದಾರೆ. ಈ ಕಡೆಯ ಪರಿವೆಯೇ ಇಲ್ಲದವರು ಅಲ್ಲಿಗೆ ಬಂದಿದ್ದಾರೆಂದರೆ ನಾನು ಹೇಗೆ ನಂಬಲಿ. ಏನೇನೊ ಸುಳ್ಳು ಕೇಳಿಕೊಂಡುಬಂದು ಮನೆಯೊಳಗೆಲ್ಲ ಸುತ್ತಾಡಿ, ರಾತ್ರಿ ದರೋಡೆಗೆ ಬರುವವರ ಸಂಖ್ಯೆ ಹೆಚ್ಚಿದೆಯಂತೆ. ನನ್ನ ಕಣ್ಣೆದುರಿಗೇ ಇಷ್ಟು ದೊಡ್ಡ ಸುಳ್ಳು ಹೇಳುವ ನಿಮ್ಮನ್ನು ನಾನು ನಂಬುವುದಿಲ್ಲ. ಕೂಡಲೇ ಹೊರಡಿ."

"ಅಂಥವನು ನಾನಲ್ಲ. ಒಮ್ಮೆ ಅವರನ್ನು ನೋಡಿ ಹೋಗುತ್ತೇನೆ."

"ಅವರಿಲ್ಲಿ ಇಲ್ಲ, ಆಸ್ಪತ್ರೆಯಲ್ಲಿದ್ದಾರೆ. ನೀವು ನೋಡುವುದೂ ಬೇಡ. ಸದ್ಯ ಇಲ್ಲಿಂದ ಹೊರಡಿ. ಇನ್ನೂ ಹೊರಡದಿದ್ದರೆ ಆಚೀಚೆಯವರನ್ನು ಕೂಗಿ ಕರೆಯಬೇಕಾಗುತ್ತದೆ."

ಭಾಸ್ಕರನಿಗೆ ಈಗ ನಿಜವಾಗಲೂ ದಿಗ್ಭ್ರಮೆಯಾಯಿತು. 'ಯಾರೂ ಯಾರನ್ನೂ ನಂಬದಂತಹ ಈಗಿನ ಕಾಲದಲ್ಲಿ ಅವರು ನನ್ನನ್ನು ನಂಬದಿರುವುದು ಸಹಜವೇ. ಆದರೆ ಒಮ್ಮೆಯಾದರೂ ಜೋಯಿಸರನ್ನು ನೋಡಬೇಕಿತ್ತು. ನನ್ನ ರೂಮಿನಲ್ಲಿ ಉಳಿದು ಮಾತಾಡಿಕೊಂಡು ಹೋದದ್ದೇ ಸುಳ್ಳು ಎನ್ನುವುದಾದರೆ ನನಗೇನಾದರೂ ಹುಚ್ಚು ಹಿಡಿದಿದೆಯೇ? ಛೆ! ಏನೂ ಅರ್ಥವಾಗುತ್ತಿಲ್ಲವಲ್ಲ. ಸುಮ್ಮನೆ ಇಲ್ಲಿಂದ ಹೊರಡುವುದೇ ಒಳಿತು' ಎಂದು ಅಲ್ಲಿಂದ ಹೊರಟ. ಸಾವಿರಸಾವಿರ ಪ್ರಶ್ನೆಗಳು ಅವನನ್ನು ಕಾಡತೊಡಗಿದವು. ಹತ್ತು ಹೆಜ್ಜೆ ಮುಂದೆ ಹೋದವನಿಗೆ ತಾನು ತಂದಿದ್ದ ಜೋಯಿಸರ ಫೋಟೊವನ್ನಾದರೂ ಕೊಟ್ಟು ಹೋಗುವ ಎಂತೆಣಿಸಿತು. ತಿರುಗಿ ಜೋಯಿಸರ ಮನೆಗೆ ಬಂದ.

ಲಲಿತ ಫೋನಿನಲ್ಲಿ ಹೆದರಿದ ಮುಖದಲ್ಲಿ ಮಾತಾಡುತ್ತಿದ್ದಳು. ಆಸ್ಪತ್ರೆಯಿಂದ ಅವಳ ಗಂಡ ಪ್ರಕಾಶ, "ನಿನ್ನಪ್ಪ ನಮ್ಮನ್ನಗಲಿದರು," ಎಂದಿದ್ದು ಕೇಳಿ ಕುಸಿದು ಕುಳಿತಳು.

ಹೊರಗಡೆ ನಿಂತಿದ್ದ ಭಾಸ್ಕರ ತಾನು ಕಟ್ಟುಹಾಕಿಸಿ ತಂದಿದ್ದ ಜೋಯಿಸರ ಫೋಟೊಕ್ಕೆ ಸುತ್ತಿದ ಕಾಗದವನ್ನು ಬಿಡಿಸಿ ನೋಡಿದ. ಆದರೆ ಅದರಲ್ಲಿ ಕೇಶವ ಜೋಯಿಸರ ಫೋಟೊ ಇರಲೇ ಇಲ್ಲ!


## ವಿಷ್ಣು ಭಟ್ಟ ಹೊಸ್ಮನೆ

ಕತೆ, ಕವನ, ಲಘು ಹಾಸ್ಯದ ಬರಹಗಳನ್ನು ಬರೆಯುವುದು, ಓದುವುದು, ಚಿತ್ರ ಬಿಡಿಸುವುದು, ಜೇಡಿಮಣ್ಣಿನಲ್ಲಿ ಕಲಾಕೃತಿಗಳನ್ನು ಮಾಡುವುದು ವಿಷ್ಣು ಭಟ್ಟರ ಹವ್ಯಾಸಗಳು. ಹುಟ್ಟಿದ ಊರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಗುಂಡಿಬೈಲ್ ಎಂಬ ಹಳ್ಳಿ. ಪ್ರಸ್ತುತ ಉಡುಪಿಯ ಆತ್ರಾಡಿ ಗ್ರಾಮದಲ್ಲಿ ವಾಸ.